SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UINIVERSITY LIBRARY & LEARNING RESOURCE CENTRE

Online Newspaper Clipping Service
**Dated, Sunday 29th January – 2017**

ಉದಯವಾಣಿ

**Pg.No.04**

## ಆರೋಗ್ಯ ತಪಾಸಣೆ

■ ಪೌರಕಾರ್ಮಿಕರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು

# ಉತ್ತಮ ಆರೋಗ್ಯವಿಲ್ಲದಿದ್ದರೆ ಜೀವನ ವ್ಯರ್ಥ: ಶ್ರೀನಿವಾಸರೆಡ್ಡಿ

**ಮುಳಬಾಗಿಲು:** ಮನುಷ್ಯರು ಎಷ್ಟೇ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ್ದರೂ ಉತ್ತಮ ಆರೋಗ್ಯವಿಲ್ಲದಿದ್ದರೇ ಜೀವನವೇ ವ್ಯರ್ಥವೆಂದು ರೋಟರಿ ಸೆಂಟ್ರಲ್‌ನ ಅಧ್ಯಕ್ಷ ಎಂ.ಎಸ್. ಶ್ರೀನಿವಾಸರೆಡ್ಡಿ ತಿಳಿಸಿದರು.

ಕೋಲಾರದ ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಶ್ರೀದೇವರಾಜ ಅರಸ್ ವೈದ್ಯಕೀಯ ಮಹಾ ವಿದ್ಯಾಲಯ, ನಾರಾಯಣ ಹೃದಯಾಲಯ, ರೋಟರಿ ಮುಳಬಾಗಿಲು ಸೆಂಟ್ರಲ್ ಮತ್ತು ನಗರಸಭೆ ಇವರುಗಳ ಸಂಯುಕ್ತಾಶ್ರಯದಲ್ಲಿ ಪೌರಕಾರ್ಮಿಕರಿಗಾಗಿ ಏರ್ಪಡಿಸಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ಪೌರಕಾರ್ಮಿಕರು ದೈನಂದಿನ ಕೆಲಸ ಕಾರ್ಯಗಳಿಂದ ಒತ್ತಡ ಸಿಲುಕಿ ಸಮತೋಲನ ಆಹಾರ ಸೇವನೆ ಮಾಡದೇ ತಮ್ಮ ಆರೋಗ್ಯವನ್ನು ಕಡೆ ನಿರ್ಲಕ್ಷ್ಯಿಸಾಳುತ್ತಿರುತ್ತಾರೆ, ಆದ್ದರಿಂದ ಜನಸಾಮಾನ್ಯರು ತಮ್ಮ ದೈನಂದಿಂನ ಕಾರ್ಯಚಟುವಟಿಕೆಗಳಲ್ಲಿ ಉಂಟಾಗುವ ಉಂಟಾಗುವ ಒತ್ತಡಗಳನ್ನು ನಿವಾರಣೆಗಾಗಿ ವ್ಯಾಯಾಮದೊಂದಿಗೆ ಹಣ್ಣು ತರಕಾರಿಗಳ ಸೇವನೆಯೊಂದಿಗೆ ಉತ್ತಮ ಆಹಾರ ಸೇವನೆ ಮಾಡಿಸುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರು.

ನಗರಸಭೆ ಅಧ್ಯಕ್ಷ ಎಂ.ಆರ್. ಮುರಳಿ ಮಾತನಾಡಿ, ಪೌರಕಾರ್ಮಿಕರು ಪ್ರತಿನಿತ್ಯವೂ ನಗರದ ಸ್ವಚ್ಛತಾ ಕಾರ್ಯಕ್ಕೆ ನಸುಕಿನಲ್ಲಿಯೇ ಆಗಮಿಸಿ ಕೆಲಸ ಮಾಡುವುದರಿಂದ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅವರ ಆರೋಗ್ಯ ಹದಗೆಡುತ್ತಿರುತ್ತದೆ. ಇಂತಹ ಸನ್ನಿವೇಶದಲ್ಲಿ ಅವರ ಆರೋಗ್ಯ ಸಂರಕ್ಷಣೆ ದೃಷ್ಟಿಯಿಂದ ಇಂತಹ ಆರೋಗ್ಯ ತಪಾಸಣೆಗಳು 3-4 ತಿಂಗಳಿಗೊಮ್ಮೆ ನಡೆಸುತ್ತಿದ್ದರೆ ಉತ್ತಮವೆಂದರು.

ಪೌರಕಾರ್ಮಿಕರು ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಮದು ಹೇಳಿದರು.

ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ನಯಾಜ್, ಸದಸ್ಯರಾದ ಠಾಕೋರ್‌ಸಿಂಗ್, ನಾಗರಾಜ್, ವ್ಯವಸ್ಥಾಪಕ ಶ್ರೀನಿವಾಸಮೂರ್ತಿ, ರೋಟರಿ ಸೆಂಟ್ರಲ್‌ನ ಕಾರ್ಯದರ್ಶಿ ಎಚ್.ವೆಂಕಟಗಿರಿಯಪ್ಪ, ಪರಿಸರ ಅಭಿಯಂತರೆ ಶೋಭಾ, ಹಿರಿಯ ಆರೋಗ್ಯ ನಿರೀಕ್ಷಕ ಕಾಯಲೂರು ನಾಗರಾಜ್, ಶಿವಾರೆಡ್ಡಿ, ರಾಜಸ್ವ ನಿರೀಕ್ಷಕ ಶೋಭನ್‌ಬಾಬು, ಡಾ.ಕೃಷ್ಣಮೂರ್ತಿ, ರೊಟೇರಿಯನ್ ಸುದರ್ಶನ್, ನಾಗರಾಜ್, ಸೇರಿದಂತೆ ನೂರಾರು ಜನರು ಶಿಭಿರದಲ್ಲಿ ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.



ಆರ್.ಎಲ್.ಜಾಲಪ್ಪ ಆಸ್ಪತ್ರೆ, ರೋಟರಿ ಮುಳಬಾಗಿಲು ಸೆಂಟ್ರಲ್ ಸಂಯುಕ್ತಾಶ್ರಯದಲ್ಲಿ ಪೌರಕಾರ್ಮಿಕರಿಗಾಗಿ ಏರ್ಪಡಿಸಲಾಗಿದ್ದ ಆರೋಗ್ಯ ತಪಾಸಣೆ ಶಿಬಿರವನ್ನು ನಗರಸಭಾಧ್ಯಕ್ಷ ಎಂ.ಆರ್.ಮುರಳಿ ಮತ್ತು ರೋಟರಿ ಅಧ್ಯಕ್ಷ ಶ್ರೀನಿವಾಸರೆಡ್ಡಿ ಉದ್ಘಾಟಿಸಿದರು.

# ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ

## ಪೌರಕಾರ್ಮಿಕರಿಗೆ ನಗರಸಭೆ ಅಧ್ಯಕ್ಷ ಮುರಳಿ ಸಲಹೆ

**ವಿಜಯವಾಣಿ ಸುದ್ದಿಜಾಲ** ಮುಳಬಾಗಿಲು

ಪೌರಕಾರ್ಮಿಕರು ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಕೊಂಡು ಸಮಸ್ಯೆಗಳನ್ನು ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯಬೇಕು ಎಂದು ನಗರಸಭಾಧ್ಯಕ್ಷ ಎಂ.ಆರ್.ಮುರಳಿ ಹೇಳಿದರು.

ನಗರಸಭೆ ಕಾರ್ಯಾಲಯದಲ್ಲಿ ಪೌರಕಾರ್ಮಿಕರಿಗೆ ರೋಟರಿ ಸಂಸ್ಥೆ ಹಾಗೂ ಆರ್.ಎಲ್.ಜಾಲಪ್ಪ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ನಗರ ಸ್ವಚ್ಛ ಮಾಡಿ ನಗರದ ಆರೋಗ್ಯ ಕಾಪಾಡುವ ಪೌರಕಾರ್ಮಿಕರು ತಮ್ಮ ಆರೋಗ್ಯ ನಿರ್ಲಕ್ಷಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ರೋಟರಿ ಸಂಸ್ಥೆ ಉಚಿತವಾಗಿ ಏರ್ಪಡಿಸಿರುವ ಆರೋಗ್ಯ ತಪಾಸಣಾ ಶಿಬಿರ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ರೋಟರಿ ಮುಳಬಾಗಿಲು ಸೆಂಟ್ರಲ್ ಅಧ್ಯಕ್ಷ ಎಂ.ಎಸ್.ಶ್ರೀನಿವಾಸರೆಡ್ಡಿ, ಜಾಲಪ್ಪ ಆಸ್ಪತ್ರೆ ಮೂಳೆತಜ್ಞವೈದ್ಯ ಡಾ.ಶ್ರೀನಿವಾಸ್, ರೋಟರಿ ಪ್ರಧಾನ ಕಾರ್ಯದರ್ಶಿ ಎಚ್.ವೆಂಕಟಗಿರಿಯಪ್ಪ ಮಾತನಾಡಿದರು.

ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ನಯಾಜ್‌ಪಾಷಾ, ಸದಸ್ಯರಾದ ಜಿ.ಠಾಕೂರ್‌ಸಿಂಗ್, ಜಿ.ನಾಗರಾಜ್, ಎಸ್‌ಜೆಎಸ್‌ಆರ್‌ವೈ ಸಂಯೋಜಕ ಶ್ರೀನಿವಾಸ್, ಪರಿಸರ ಇಂಜಿನಿಯರ್ ಎಂ.ಎನ್.ಶೋಭಾ, ಆರೋಗ್ಯ ನಿರೀಕ್ಷಕರಾದ ತಾಯಲೂರು ನಾಗರಾಜ್, ಶಿವಾರೆಡ್ಡಿ, ರೋಟರಿ ಮಾಜಿ ಅಧ್ಯಕ್ಷ ಬಿ.ರಮೇಶ್‌ಕುಮಾರ್, ರೊಟೇರಿಯನ್‌ಗಳಾದ ಪಿ.ಎಸ್.ರಮೇಶ್, ಆರ್.ಕೆ.ಸುದರ್ಶನ್‌ಬಾಬು, ಮಹದೇವಪ್ಪ ಇದ್ದರು.



ಮುಳಬಾಗಿಲು ನಗರಸಭೆಯಲ್ಲಿ ಪೌರಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಗರಸಭಾಧ್ಯಕ್ಷ ಎಂ.ಆರ್.ಮುರಳಿ, ರೋಟರಿ ಮುಳಬಾಗಿಲು ಸೆಂಟ್ರಲ್ ಅಧ್ಯಕ್ಷ ಎಂ.ಎಸ್.ಶ್ರೀನಿವಾಸರೆಡ್ಡಿ ಉದ್ಘಾಟಿಸಿದರು.